ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 4188

ಸದಸ್ಯರ ಹೆಸರು : ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮುಟ)

ಉತ್ತರಿಸುವವರು : ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ
ಮಾನ್ಯ ಅರಣ್ಯ, ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 4188

(ಉತ್ತರದ ಪ್ರತಿಯನ್ನು ಲಗತ್ತಿಸಿದೆ)

ಸಂಖ್ಯೆ	ಪ್ರಶ್ನೆ	ಉತ್ತರ
1	ಉತ್ತರ ಕನ್ನಡ ಜಿಲ್ಲೆಯಲ್ಲಿ ಅನೇಕ ವನಪಾಲಕರ ಹಾಗೂ ಅರಣ್ಯ ರಕ್ಷಕರ ಹುದ್ದೆ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;	ಹೌದು
2	ಹೀಗೆ ಹಲವಾರು ಹುದ್ದೆಗಳು ಖಾಲಿ ಇರುವುದರಿಂದ ಅರಣ್ಯ ರಕ್ಷಣೆಗೆ ಹಿನ್ನೆಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ	ಹೌದು
3	ಗಮನಕ್ಕೆ ಬಂದಿದ್ದಲ್ಲಿ ಖಾಲಿ ಇರುವ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಲಾಗುವುದೇ?	ಸರ್ಕಾರವು 5 ವರ್ಷದ ಅವಧಿಯಲ್ಲಿ ರಾಜ್ಯಕ್ಕೆ ಒಟ್ಟು 350 ವನಪಾಲಕ ಹಾಗೂ 500 ಅರಣ್ಯ ರಕ್ಷಕರನ್ನು ನೇಮಿಸಲು ಅನುಮತಿಸಿದೆ. ಅದರಂತೆ ನೇಮಕಾತಿ ಪ್ರಕ್ರಿಯೆ ಜಾರಿಯಲ್ಲಿದೆ. ಕೆನರಾ ವೃತ್ತಕ್ಕೆ ಪ್ರತೀ ವರ್ಷ 15 ವನ ಪಾಲಕ ಮತ್ತು 20 ಅರಣ್ಯ ರಕ್ಷಕರನ್ನು ಹೊಸದಾಗಿ ನೇಮಕಾತಿ ಮಾಡಲು ಕ್ರಮ ಜರುಗಿಸಲಾಗಿದೆ

ಶ್ರೀ ಮೋಹನ್ ಕೃಷ್ಣ ಶೆಟ್ಟಿ: ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ, ಆದರೆ ಕೆನರ ವೃತ್ತಕ್ಕೆ ಪ್ರತಿ ವರ್ಷ 15 ವನಪಾಲಕ ಹಾಗೂ 20 ಅರಣ್ಯ ರಕ್ಷಕರನ್ನು ಹೊಸದಾಗಿ ನೇಮಕಾತಿ ಮಾಡಲು ಕ್ರಮ ಜರುಗಿಸ ಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ಏಳು ಡಿಎಫ್ಓ ವಲಯಗಳಿವೆ; ಅಂತಹ ಒಂದು ವಲಯದಲ್ಲಿಯೇ 102 ಅರಣ್ಯ ರಕ್ಷಕರ ಮಂಜೂರಾತಿ ಹುದ್ದೆಗಳಿವೆ. ಅಲ್ಲಿ ಅರ್ಧದಷ್ಟು ಅಂದರೆ 50 ಪೋಸ್ಟ್‌ಗಳು ಖಾಲಿ ಇವೆ. 50 ಪೋಸ್ಟ್‌ಗಳೇನು ತುಂಬಿದ್ದಾರೆ, ಅದು ಕೂಡ 50 ವರ್ಷದ ಹಿಂದಿನದು. ಆಗ ಗ್ರಾಮೀಣ ಸಂಪರ್ಕ ವ್ಯವಸ್ಥೆಯಾಗಲಿ ಅಥವಾ ಮೆಷನರಿಗಳಾಗಲಿ ಇಲ್ಲದೆ ಇದ್ದುದರಿಂದ ಇಂತಹ ಪರಿಸ್ಥಿತಿಯಲ್ಲಿ ಆವಾಗ ಗ್ರಾಮೀಣ ಸಂಪರ್ಕ ವ್ಯವಸ್ಥೆ ಇರಲಿಲ್ಲ, ವಾಹನ ಸೌಕರ್ಯವು ಇರಲಿಲ್ಲ ಅಂತಹ ಕಾಲದಲ್ಲಿ 102 ಪೋಸ್ಟ್‌ಗಳ ಮಂಜೂರಾತಿ ಕೊಟ್ಟಿದ್ದರು. ಆ 102 ಪೋಸ್ಟ್‌ಗಳಲ್ಲಿ ಈಗ 50 ಪೋಸ್ಟ್ ಕಡಿಮೆ ಇದೆ. ಆ 102 ಪೋಸ್ಟ್‌ಗಿಂತ ಹೆಚ್ಚು ಇರಬೇಕಾಗಿತ್ತು. ಈಗ 50 ಪೋಸ್ಟ್‌ಗಳು ಅರ್ಧಕ್ಕಿಂತ ಕಡಿಮೆ ಇದ್ದು, ಈಗ ಅವರು 20 ಅರಣ್ಯ ರಕ್ಷಕರು ಏಳು ವಲಯಕ್ಕೆ ಒಂದು ವರ್ಷಕ್ಕೆ ಮೂರರಂತೆ ಮಾಡಿಕೊಂಡಿದ್ದಾರೆ. ವರ್ಷಕ್ಕೆ ಮೂರರಂತೆ ಆದರೆ ಎಷ್ಟು ವರ್ಷದಲ್ಲಿ ಈ 50 ಪೋಸ್ಟ್ ಮತ್ತು ಹೆಚ್ಚಿನ ಪೋಸ್ಟ್‌ಗಳು ಯಾವಾಗ ಬೇಕಾಗಬಹುದು, ಅತೀ ಜರೂರು ಇದೆ ಎಂದು ನಾನು ಮಾನ್ಯ ಸಚಿವರಲ್ಲಿ ಕೇಳಲಿಚ್ಚಿಸುತ್ತೇನೆ.

ಶ್ರೀ ತನ್ವೀರ್ ಸೇಠ್: ಸನ್ಮಾನ್ಯ ಅಧ್ಯಕ್ಷರೇ ಕೆನರಾ ವೃತ್ತದಲ್ಲಿ 1471 ಹುದ್ದೆಗಳು ಮಂಜೂರು ಆಗಿದೆ, ಅದರಲ್ಲಿ 1054 ಭರ್ತಿಯಾಗಿದೆ. ಇನ್ನು 417 ಹುದ್ದೆಗಳು ಖಾಲಿ ಇವೆ. ಇನ್ನು 578 ದಿನಗೂಲಿಯವರನ್ನು ತೆಗೆದುಕೊಂಡು ಕೆಲಸ ಮಾಡಿಸುತ್ತಿದ್ದೇವೆ. ಇಡೀ ರಾಜ್ಯದಲ್ಲೇ ಒಟ್ಟು 1718 ಪೋಸ್ಟ್‌ಗಳು ಖಾಲಿ ಇವೆ, ಅದನ್ನು ಕೂಡ ಭರ್ತಿ ಮಾಡಲು ಹಣಕಾಸು ಇಲಾಖೆಗೆ ಕಳುಹಿಸುತ್ತಿದ್ದೇವೆ. ಆದಷ್ಟು ಶೀಘ್ರವಾಗಿ ಭರ್ತಿ ಮಾಡುವ ಕೆಲಸ ಮಾಡುವ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಮೋಹನ್ ಕೃಷ್ಣ ಶೆಟ್ಟಿ: ನಾನು ರಾಜ್ಯ ಮಟ್ಟದ್ದು ಕೇಳುತ್ತಿಲ್ಲ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮಘಟ್ಟ ಅರಣ್ಯ ಬಹಳ ಇದೆ, ಬೆಲೆಬಾಳುವ ಮರಗಳಾದ ಬೀಟೆ, ಸಾಗುವಾನಿ ಮರಗಳು ಇವೆ. ರಸ್ತೆ ಸಂಪರ್ಕ, ವಾಹನ ಸೌಕರ್ಯದಿಂದಾಗಿ ಆಧುನಿಕ ಯುಗದಲ್ಲಿ ಕಳವಾಗುತ್ತಿದೆ.

ಶ್ರೀ ಮೋಹನ್ ಕೃಷ್ಣ ಶೆಟ್ಟಿ: ಅವು ಕಳವಾಗುತ್ತಿದ್ದು ಇವತ್ತಿನ ಆಧುನಿಕ ರಸ್ತೆ ಸಂಪರ್ಕ ಹಾಗೂ ವಾಹನ ಸೌಕರ್ಯದಿಂದ. ಹಾಗಾಗಿ ಅಲ್ಲಿ ಮಂಜೂರಾದ ಸ್ಥಾನಗಳ ಅರ್ಧದಷ್ಟಕ್ಕೆ ಗ್ರಾಮ ರಕ್ಷಕರು ಕಡಿಮೆ ಇದ್ದಾರೆ. ಅದನ್ನು ಹೆಚ್ಚಿಸಬೇಕು. ಅರ್ಧದಷ್ಟಿರುವ ಗ್ರಾಮರಕ್ಷಕರು ಹೇಗೆ ಅರಣ್ಯ ಕಾದುಕೊಳ್ಳಬಹುದು ಅಂತ ತಮ್ಮಲ್ಲಿ ಆ ಪ್ರಶ್ನೆ ಕೇಳುತ್ತಿದ್ದೇನೆ. ಆದ್ದರಿಂದ ಅರಣ್ಯರಕ್ಷಕರ ಸಂಖ್ಯೆ ಹೆಚ್ಚಿಸಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇಡೀ ಜಿಲ್ಲೆಗೆ ಸಂಬಂಧಪಟ್ಟಂತೆ ಒಳ್ಳೆಯ ಪ್ರಶ್ನೆ ಬಂದಿದೆ. ಅರಣ್ಯಸಚಿವರು ಏನು ಹೇಳಿದರು ಅಂದರೆ 1718ಹುದ್ದೆ ಇಡೀ ರಾಜ್ಯದಲ್ಲಿ ಖಾಲಿ ಇವೆ. ಬಳ್ಳಾರಿ ಜಿಲ್ಲೆಗಳಿಗೆ ನಾಲ್ಕು ದಿನ ತಡವಾಗಿ ಅರಣ್ಯರಕ್ಷಕರನ್ನು ಮತ್ತು ಖಾಲಿ ಇರುವ ಬೇರೆಬೇರೆ ಅಧಿಕಾರಿಗಳನ್ನು ನೇಮಿಸಿದರೆ ಏನೂ ತೊಂದರೆಯಾಗುವುದಿಲ್ಲ. ಏಕೆಂದರೆ ಅಲ್ಲಿ ಇರುವ ಅರಣ್ಯವೇ ಅಷ್ಟು. ಆದರೆ ಪಶ್ಚಿಮಘಟ್ಟದಲ್ಲಿರುವ ಉತ್ತರ ಕನ್ನಡ, ಶಿವಮೊಗ್ಗ, ಕೊಡಗು, ಚಿಕ್ಕಮಗಳೂರುಗಳಂತಹ ಜಿಲ್ಲೆಗಳಿಗೆ ನೀವು ಆದ್ಯತೆ ಮೇರೆಗೆ ನೇಮಕಾತಿ ಮಾಡದೇಹೋದರೆ ಈಗಿರುವ ಅರಣ್ಯವೂ ಪೂರ್ಣ ಕಳ್ಳತನವಾಗಿ ಹೋಗುತ್ತದೆ. ನಾಶವಾಗಿ ಹೋಗುತ್ತದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ದಿನಕ್ಕೆ ಹತ್ತಾರು ಪ್ರಕರಣಗಳನ್ನು ಗುರ್ತಿಸುತ್ತಿದ್ದಾರೆ. ಆದರೆ ಪ್ರಕರಣಗಳು ಇವರ ಗಮನಕ್ಕೇ ಬರದಂತೆ ಹೋಗುತ್ತಾ ಇವೆ, ಇವರ ಅರಣ್ಯಭವನದಲ್ಲಿ ಎಲ್ಲ ಅಧಿಕಾರಿಗಳೂ ತುಂಬಿಕೊಂಡಿದ್ದಾರೆ. ಕೆಳಗಡೆ ನೋಡಿದರೆ ಯಾರೂ ಇಲ್ಲ ಅರಣ್ಯ ರಕ್ಷಿಸಲು. ಹಾಗಾಗಿ ಅರಣ್ಯಭವನದಿಂದ ನಾಲ್ಕು ಜನ ಕಡಿಮೆ ಮಾಡಿ ಏನೂ ತೊಂದರೆ ಆಗುವುದಿಲ್ಲ. ಅವರನ್ನು ಸ್ವಲ್ಪ ಫೀಲ್ಡಿಗೆ ಕಳುಹಿಸಿ, ಆರೀತಿ ನೀವು ಅರಣ್ಯ ಇಲಾಖೆಯನ್ನು ರಿಶಫಲ್ ಮಾಡದೇ ಹೋದರೆ ಉತ್ತರಕನ್ನಡ, ಪಶ್ಚಿಮಘಟ್ಟಗಳ ಅರಣ್ಯ ಉಳಿಯು ವುದಿಲ್ಲ. ಆದ್ದರಿಂದ ಶೀಘ್ರವಾಗಿ ನೇಮಕ ಮಾಡಿ. ಅರಣ್ಯ ಉಳಿಸಬೇಕು ಮತ್ತು ಇಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳನ್ನು ಕಡಿಮೆ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:– ವಿಶ್ವೇಶ್ವರ ಹೆಗಡೆ ಹೇಳಿದ್ದರ ಕಡೆ ನೀವು ಗಮನ ಕೊಡಬೇಕು. ನಾನು ಶಿಕಾರಿಪುರ ತಾಲ್ಲೂಕಿನಿಂದ ಬಂದವನು, ಅಲ್ಪಸ್ವಲ್ಪ ಅಲ್ಲಿ ಕಾಡುಳಿದಿದೆ. ಯಾವುದೇ ಅರಣ್ಯಾಧಿಕಾರಿ ಇಲ್ಲ. ಬೆಳಗ್ಗೆ – ಸಂಜೆ ಅರಣ್ಯ

ಒತ್ತುವರಿ ಮಾಡಿಕೊಂಡು ಲೂಟಿ ಮಾಡುವುದು ನಿರಂತರವಾಗಿ ನಡೆದಿದೆ. ನಾವು ಅರಣ್ಯಾಧಿಕಾರಿಗಳಿಗೆ ಫೋನ್ ಮಾಡಿದರೆ ಯಾವೋನೋ ಹೇಳೋನು ಕೇಳೋನು ಇಲ್ಲ. ಅಲ್ಲಿ ಅಧಿಕಾರಿಗಳೂ ಇಲ್ಲ. ಯಾರೊಬ್ಬರು ಅಲ್ಲಿ ಕಡಿಯುತ್ತಿದ್ದಾರೆ ಹೋಗಬಾರಯ್ಯ, ಸಹಕಾರ ಕೊಡುತ್ತೇವೆ ಅಂದರೆ ಹೋಗೋಕೆ ರೆಡಿ ಇಲ್ಲ. ಅದರಲ್ಲಿ ಉದ್ದೇಶ ಏನಿದೆಯೋ ಗೊತ್ತಿಲ್ಲ, ಬೇಕಾದರೆ ವಿಶೇಷವಾಗಿ ಯಾರನ್ನಾದರೂ ಕಳಿಸಿ ತಿಳುದುಕೊಳ್ಳಿ ಏನಿದೆ ಅಂತ. ಅಲ್ಲಿ ಅಧಿಕಾರಿಗಳೂ ಇಲ್ಲ. ಯಾವುದರ ಬಗ್ಗೆಯೂ ಆಸಕ್ತಿನೂ ಇಲ್ಲ. ಹಾಗಾದರೆ ಗತಿಯೇನಾಗುತ್ತದೆ? ಕಾಡಿನ ಪರಿಸ್ಥಿತಿ ಎಲ್ಲಿಗೆ ಹೋಗಬಹುದು? ನಾವು ಸಹಕಾರ ಕೊಡುತ್ತೇವಪ್ಪ, ಹಳಬರಿಗೆ ಟಚ್ ಮಾಡಬೇಡಿ, ಹೊಸಬರಿಗೆ ಕಾಡೊಳಗೆ ಹೋಗಲು ಅವಕಾಶ ಕೊಡಬೇಡಿ ಅಂತ ಅಧಿಕಾರಿಗಳಿಗೆ ಫೋನ್ ಮಾಡಿದರೆ ಕೇಳೋದೆ ಇಲ್ಲ ಹೋಗೋದೇ ಇಲ್ಲ ಅಂದರೆ.

ಶ್ರೀ ಎಸ್.ಎಲ್.ಧರ್ಮೇಗೌಡ: ಅಧ್ಯಕ್ಷರೇ ಈ ವಿಚಾರದಲ್ಲಿ ಅರಣ್ಯವೆಲ್ಲ ಖಾಲಿಯಾಗಿ ಈಗ ರಸ್ತೆ ಬದಿಯಲ್ಲಿರುವ ಮರಗಳನ್ನು ಲೂಟಿ ಮಾಡಲು ಹೊರಟಿದ್ದಾರೆ. ಅವರ ಜಿಲ್ಲೆ ಒಂದರಲ್ಲಿ ಅಲ್ಲ, ಕರ್ನಾಟಕ ರಾಜ್ಯಾದ್ಯಂತ ಈ ದಂಧೆ ನಡೆಯುತ್ತಿದೆ. ಇರದ ಬಗ್ಗೆ ಬಹಳ ಕಠಿಣ ಕ್ರಮ ತೆಗೆದುಕೊಳ್ಳದೇ ಹೋದರೆ ತುಂಬ ಕಷ್ಟವಾಗುತ್ತದೆ.

ಶ್ರೀ ಎಂ.ಪಿ.ವೆಂಕಟೇಶ್: ತಾಲ್ಲೂಕಿನಲ್ಲಿ ಕಳೆದ 15–20 ದಿವಸಗಳಿಂದ ಸುಮಾರು ಮೂರು ವಲಯಗಳಲ್ಲಿ ಮರಗಳ ಲೂಟಿಯಾಗಿದೆ. ಅಲ್ಲಿ ಭ್ರಷ್ಟ ಅಧಿಕಾರಿಗಳನ್ನೆಲ್ಲ ವರ್ಗಾವಣೆ ಮಾಡಿದ್ದಾರೆ. ಬಿದ್ದಿದ್ದ ಮರಗಳನ್ನೆಲ್ಲ, ಈಗಾಗಲೇ ಸಾಗಿಸಿದ್ದಾರೆ. ಅಲ್ಲಿ ಬಹಳ ಕಳ್ಳತನ ಆಗುತ್ತಿದೆ. ಯಾರು ಸರಿಯಾಗಿ ಜವಾಬ್ದಾರಿಯಿಂದ ನೋಡಿಕೊಳ್ಳಲು ಅವಕಾಶ ಇಲ್ಲ. ಅರಣ್ಯ ಇಲಾಖೆಯಿಂದ ವರ್ಗಾವಣೆಯಾದ ಅಧಿಕಾರಿಗಳು ಶಾಮೀಲಾಗಿ ಈ ಹೊತ್ತುಮರಗಳನ್ನು ಕಳ್ಳತನ ಮಾಡುತ್ತಿದ್ದಾರೆ. ಅದಕ್ಕೆ ಲೆಕ್ಕ ಇಲ್ಲ, ಮರ ಬಿದ್ದಿರುತ್ತದೆ. ಅದಕ್ಕೆ ಲೆಕ್ಕ ಇರುವುದಿಲ್ಲ. ಮರಗಳನ್ನೆಲ್ಲ ಕಡಿದು ಸಾಗಿಸಿಬಿಟ್ಟು ಸುಟ್ಟುಹಾಕಿ ಈ ತರಹ ವ್ಯವಸ್ಥೆ ಮಾಡುತ್ತಿದ್ದಾರೆ. ನನ್ನ ತಾಲ್ಲೂಕಿನಲ್ಲಿ 11 ವಲಯ ಇದೆ. ಈಗಾಗಲೇ ಮೂರು ವಲಯದಲ್ಲಿ ರಾತ್ರಿ ಕಳ್ಳತನ ಆಗುತ್ತಿದೆ ಸರ್ಕಾರ ಇದಕ್ಕೆ ಗಮನಕೊಡಬೇಕು.

ಶ್ರೀ ಗುರುಪಾದಪ್ಪ ನಾಗಮಾರಪ್ಪಲ್ಲಿ: ಅಧ್ಯಕ್ಷರೇ ಕೆನರಾದಿಂದ ಏನು ಮಾಹಿತಿ ಬೇಕೆಂದು ಕೇಳಿದರೋ ಹೇಳಿದ್ದೇನೆ. ವಿಶ್ವೇಶ್ವರ ಹೆಗಡೆ ಹೇಳಿದ್ದು ನಿಜ,

ನಮ್ಮ ಕಡೆ ಅರಣ್ಯವಿಲ್ಲ. ನಮ್ಮ ಕಡೆ ಅರಣ್ಯ ಬರೀ ಮೂರು ಪರ್ಸೆಂಟ್, ನಿಮ್ಮಲ್ಲಿ 84 ಪರ್ಸೆಂಟ್‌ವರೆಗೆ ಇದೆ. ಅದಕ್ಕೇ ನನಗೆ ಮಂತ್ರಿ ಮಾಡಿದ್ದು. ಹಾಳಾಗುವಂಥದ್ದನ್ನು ರಕ್ಷಣೆ ಮಾಡುವ ಸಲುವಾಗಿ. ನಾನು ಕಾಡು ನೋಡಿಲ್ಲ ಅಂತ ಕಾಡು ನೋಡುವುದಕ್ಕೆ ಕಾಡು ಹಾಳಾಗಬಾರದು ಅಂತ ನನಗೆ ಕೊಟ್ಟಿದ್ದಾರೆ. ಅದಕ್ಕೆ ಯಾವ ಚಿಂತೆ ಮಾಡುವ ಅವಶ್ಯಕತೆ ಇಲ್ಲ. ಆಡಳಿತದ ದೃಷ್ಟಿಯಿಂದ ಕೆಲವು ಕಡಿಮೆ ಮಾಡಿ ಎಂದು ವರದಿ ಬಂದಿತ್ತು ಆ ಪ್ರಕಾರ ಕಮ್ಮಿಯಾಗಿದೆ. ಈಗ ನಾನು ಶಿಫಾರಸ್ಸು ಮಾಡಿದ್ದೇನೆ ಹಣಕಾಸು ಇಲಾಖೆಗೆ ಇಷ್ಟು ಬೇಕಾಗುತ್ತದೆ. ಇಲ್ಲಂದ್ರೆ ಬಹಳ ಕಷ್ಟವಾಗಿದೆ ಅರಣ್ಯರಕ್ಷಕರು, ಆರ್‌ಎಫ್‌ಒಗಳು ವನಪಾಲಕರು ಬಹಳ ಅವಶ್ಯಕತೆ ಇದೆ. ಅದಕ್ಕೆ ನಾವು ಬಹಳ ಸೀರಿಯಸ್ ಆಗಿ ಹೇಳುತ್ತಾ ಇದ್ದೇವೆ ಬೇಗ ಇದು ಮಾಡಿಕೊಳ್ಳುತ್ತೇವೆ. ಕಳ್ಳತನವಾಗದಂತೆ ನೋಡುವ ಜವಾಬ್ದಾರಿ ನಮ್ಮದು, ಮೊನ್ನೆ ಕೂಡ ಒಂದು ಸಭೆ ಮಾಡಿ ಒಂದು ಆದೇಶ ಹೊರಡಿಸಿದ್ದೇನೆ ಎಲ್ಲೆಲ್ಲಿ ಕಳ್ಳತನವಾಗುತ್ತಿದೆ ಅದನ್ನು ತಡೆಗಟ್ಟಬೇಕಾಗುತ್ತದೆ. ಕಳ್ಳತನ ಮಾಡಿದವರಿಗೆ, ಶಾಮೀಲಾದವರಿಗೆ ನಿರ್ದಾಕ್ಷಿಣ್ಯದಿಂದ ಮನೆಗೆ ಕಳಿಸುತ್ತೇವೆ. ಯಾರಿಗೂ ರಕ್ಷಣೆ ಕೊಡುವುದಿಲ್ಲ ಇದರ ಬಗ್ಗೆ ಯಾರೂ ಸಂಕೋಚ ಮಾಡುವ ಅವಶ್ಯಕತೆ ಇಲ್ಲ.

ಉಪಾಧ್ಯಕ್ಷರು: ಬೇಕಾದರೆ ಇದನ್ನು ಅರ್ಧ ಗಂಟೆ ಚರ್ಚೆಗೆ ತೆಗೆದುಕೊಳ್ಳೋಣ.